ಗದ್ಯ


# ಒಗ್ಗಟ್ಟಿನಲ್ಲಿ ಬಲವಿದೆ




ಕಪಿ ಸೈನ್ಯ ಲಂಕೆಗೆ ಹೋಗಬೇಕಿತ್ತು. ಆದರೆ ಮಧ್ಯದಲ್ಲಿ ವಿಶಾಲವಾದ ಸಮುದ್ರ. ಈ ಸಮುದ್ರವನ್ನು ಈಜುತ್ತಾ ದಾಟುವುದಾಗಲಿ, ಹಾರಿ ದಾಟುವುದಾಗಲಿ ಹನುಮಂತನಿಗೆ ಹೊರತು ಇನ್ನಾರಿಗೂ ಆಗದ ಮಾತಾಗಿತ್ತು. ಹನುಮ ಒಂದಷ್ಟು ಸೈನ್ಯವನ್ನು ಭುಜದ ಮೇಲೆ ಕೂಡಿಸಿಕೊಂಡು ಸಮುದ್ರ ದಾಟಬಹುದು. ಆದರೆ ಇಡೀ ಕಪಿಸೈನ್ಯವನ್ನು ಆ ಕಡೆ ದಡಕ್ಕೆ ಸಾಗಿಸುವುದು ಹೇಗೆ? ಅದಕ್ಕೆ ಎಷ್ಟೊಂದು ಸಮಯ ಬೇಕು? ಎಂದೆಲ್ಲಾ ಕಪಿಸೈನ್ಯ ಸಮುದ್ರ ದಡದಲ್ಲಿ ರಾಮ ಲಕ್ಷ್ಮಣರೊಡನೆ ಯೋಚಿಸುತ್ತಾ ಕುಳಿತಿತ್ತು.

ಇದ್ದಕ್ಕಿದ್ದ ಹಾಗೆ ಹನುಮಂತ 'ಸಮುದ್ರಕ್ಕೊಂದು ಸೇತುವೆ ಕಟ್ಟಿದರೆ?' ಎಂದ. ಆಗ ಶ್ರೀರಾಮ ತುಂಬಾ ಯೋಚಿಸಿ 'ಆಗಲಿ' ಎಂದನು. ಶ್ರೀರಾಮನ ಅನುಮತಿ ದೊರೆತ ಕೂಡಲೆ ಕಪಿಸೈನ್ಯ ದೊಡ್ಡ ದೊಡ್ಡ ಬಂಡೆ ಕಲ್ಲುಗಳನ್ನು ಹೊತ್ತು ತಂದು 'ಜೈ ಶ್ರೀರಾಮ' ಎನ್ನುತ್ತಾ ಸಮುದ್ರದಲ್ಲಿ ಹಾಕಲಾರಂಭಿಸಿತು. ರಾಮನ

ಠಕ್ತಿಯೋ. ಇಲ್ಲ ಕಪಿಗಳ ಭಕ್ತಿಯೋ! ಹಾಕಿದ ಕಲ್ಲುಗಳು ಆ ಕಡೆ ಈ ಕಡೆ ಚಲಿಸದೆ ಸೇತುವೆ ನಿರ್ಮಾಣವಾಗುತ್ತಾ ಬಂದಿತು.





ಸಮುದ್ರ ತೀರದಲ್ಲಿ ಒಂದು ಅಳಿಲು ಇತ್ತು. ಆ ಅಳಿಲು ಕಪಿಗಳೆಲ್ಲಾ ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಹೊತ್ತು ಸಮುದ್ರಕ್ಕೆ ಎಸೆಯುತ್ತಿದ್ದುದನ್ನು ನೋಡಿ, ತಾನು ಕೂಡ ಚಿಕ್ಕ ಚಿಕ್ಕ ಕಲ್ಲುಗಳನ್ನು ತಂದು ತಂದು ಸಮುದ್ರಕ್ಕೆ ಎಸೆಯಲು ಪ್ರಾರಂಭಿಸಿತು. ಆ ಪುಟ್ಟ ಪ್ರಾಣಿಯ ಕಾರ್ಯಶ್ರದ್ಧೆಯನ್ನು ಶ್ರೀರಾಮ ಕಂಡನು. ಅಳಿಲನ್ನು ಪ್ರೀತಿಯಿಂದ ಎತ್ತಿಕೊಂಡನು. ತನ್ನ ಕೈಯಿಂದ ಅದರ ಬೆನ್ನನ್ನು ನೇವರಿಸಿದನು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂದನು. ಸೇತುವೆ ನಿರ್ಮಾಣವಾಯಿತು. ಕಪಿ ಸೈನ್ಯ ಕೇಕೆ ಹಾಕುತ್ತಾ ಸಮುದ್ರವನ್ನು ದಾಟಿತು. ಲಂಕಾ ನಗರವನ್ನು ಸೇರಿದ ಕಪಿ ಸೈನ್ಯ ಯುದ್ಧೋತ್ಸಾಹದಿಂದ ಕುಣಿದಾಡುತ್ತಿತ್ತು.



# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ಸೈನ್ಯ = ದಳ (Army)
2. ಬಂಡೆ = ದೊಡ್ಡ ಕಲ್ಲು (Rock)
3. ದಡ = ತೀರ (Bank)
4. ನಿರ್ಮಾಣ = ರಚನೆ (Construction)
5. ಯುದ್ಧ = ಕದನ (War)

## II. ವಿರುದ್ಧ ಪದಗಳನ್ನು ಬರೆಯಿರಿ.

1. ಕಟ್ಟು × ______ 3. ದೊಡ್ಡದು × ______
2. ಹೋಗು × ______ 4. ಪ್ರೀತಿ × ______

## III. ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳವನ್ನು ತುಂಬಿರಿ.

1. ಕಪಿ ಸೈನ್ಯ ................ ಗೆ ಹೋಗಬೇಕಿತ್ತು. (ಕಾಶಿಗೆ, ಲಂಕೆಗೆ, ಕನ್ಯಾಕುಮಾರಿಗೆ)
2. ರಾಮನು ................ ನ್ನು ಪ್ರೀತಿಯಿಂದ ಎತ್ತಿಕೊಂಡನು. (ನಾಯಿ, ಬೆಕ್ಕು, ಅಳಿಲು)
3. ಕಪಿ ಸೈನ್ಯ ................ ಹಾಕುತ್ತಾ ಸಮುದ್ರವನ್ನು ದಾಟಿತು. (ಕೇಕೆ, ಕೊಕ್ಕೆ, ಕೂಗು)
4. ಒಗ್ಗಟ್ಟಿನಲ್ಲಿ ................ ಇದೆ. (ಪ್ರೀತಿ, ಬಲ, ಧೈರ್ಯ)

## IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಮುದ್ರವನ್ನು ದಾಟುವುದು ಯಾರಿಗೆ ಮಾತ್ರ ಸಾಧ್ಯವಿತ್ತು?

______________________________

2. ಸಮುದ್ರ ದಡದಲ್ಲಿ ಯಾರೆಲ್ಲಾ ಯೋಚಿಸುತ್ತಾ ಕುಳಿತಿದ್ದರು?

______________________________

3. ಹನುಮಂತನು ಯಾವುದಕ್ಕೆ ಸೇತುವೆ ಕಟ್ಟಲು ತಿಳಿಸಿದನು?

______________________________

4. ಕಪಿ ಸೈನ್ಯವು ಎಂತಹ ಕಲ್ಲುಗಳನ್ನು ಹೊತ್ತು ತಂದಿತು?

______________________________

5. ರಾಮನು ಯಾರ ಕಾರ್ಯಶ್ರದ್ಧೆಯನ್ನು ಮೆಚ್ಚಿದನು?

______________________________

## V. ಯಾರು ಯಾರಿಗೆ ಹೇಳಿದರು?

1. "ಸಮುದ್ರಕ್ಕೊಂದು ಸೇತುವೆಯನ್ನು ಕಟ್ಟಿದರೆ?"

______________________________

______________________________

2. "ಒಗ್ಗಟ್ಟಿನಲ್ಲಿ ಬಲವಿದೆ."

______________________________


______________________________



## ಚಟುವಟಿಕೆ

**1. ಕೆಳಗಿನ ಪದ ಗುಚ್ಛವನ್ನು ಗಮನಿಸಿ. ಅದರಂತೆ 'ನ' ಪದಕ್ಕೆ ಪದಗುಚ್ಛ ರಚಿಸಿ.**

**ಮಾದರಿ :**



2. ರಾಮಾಯಣದಲ್ಲಿ ಬರುವ ಶಬರಿ ಕಥೆಯನ್ನು ಶಿಕ್ಷಕರಿಂದ ಇಲ್ಲವೇ ತಂದೆ-ತಾಯಿಗಳಿಂದ ಕೇಳಿ ತಿಳಿದು ಬರೆಯಿರಿ.

3. ರಾಮಾಯಣದಲ್ಲಿ ಬರುವ ಶ್ರವಣ ಕುಮಾರನ ಕಥೆಯನ್ನು ತಿಳಿದು ಬರೆಯಿರಿ.

"ಒಂದಾಗಿ ಬಾಳೋಣ, ಗುರಿಯನ್ನು ಸೇರೋಣ."